# ಮಬ್ಬಲಿ ಗೋಸಾಲ

ಕ್ರಿಸ್ತ ಪೂರ್ವ 6 ಮತ್ತು 7ನೇ ಶತಮಾನಗಳು ವಿಶ್ವದಲ್ಲಿ ತೀವ್ರವಾದ ಸಂಘರ್ಷಗಳ ಕಾಲವಾಗಿತ್ತು. ಧಾರ್ಮಿಕವಾಗಿ, ದಾರ್ಶನಿಕವಾಗಿ, ಆರ್ಥಿಕವಾಗಿ ಹೊಸ ಸ್ಥಿತ್ಯಂತರಗಳಿಗೆ ತೀವ್ರವಾಗಿ ತುಡಿಯುತ್ತಿದ್ದ ಸಂಘರ್ಷದ ಕಾಲವಾಗಿತ್ತು. ಬುಡಕಟ್ಟು ಜನಾಂಗದ ವ್ಯವಸ್ಥೆ ಈ ಸಂಘರ್ಷದ ಕಾಲದಲ್ಲಿ ಹೊಸದೊಂದು ಆವಿಷ್ಕಾರಕ್ಕೆ ಒಳಗಾಗುತ್ತಿದ್ದ ಕಾಲಘಟ್ಟದಿಂದಾಗಿತ್ತು. ಚಾರ್ವಾಕರು ಅಥವಾ ಲೋಕಾಯತರು ಈಶ್ವರ ಅಥವಾ ನಿರೀಶ್ವರವಾದದ ಹೊಸದೊಂದು ಚಿಂತನಾಕ್ರಮವನ್ನು ಜನಮನದಲ್ಲಿ ಭಿತ್ತಿ ವಿಚಾರವಾದದ ಕಡೆಗೆ ಅನುವುಗೊಳಿಸಿದ್ದರು. ಚಾರ್ವಕರು ಭಾರತೀಯ ಸ್ವಭಾವದ ಮತ್ತು ಭೌತವಾದದ ಮುಖ್ಯ ಪ್ರತಿನಿಧಿಗಳಾಗಿದ್ದರು. ಈ ಎರಡೂ ವಿಚಾರಧಾರೆಗಳು ಈಗಾಗಲೇ ಭಾರತೀಯ ದರ್ಶನಗಳ ಆಧಾರ ಸ್ತಂಭಗಳೆನಿಸಿದ್ದ ವೇದೋಪನಿಷತ್ತುಗಳ ಕಾಲದಲ್ಲಿಯೇ ಚಾಲ್ತಿಯಲ್ಲಿದ್ದು ಖಚಿತವಾದ ಸ್ವರೂಪ ಪಡೆದಿದ್ದು ಆಜೀವಿಕ ಮತ್ತು ಚಾರ್ವಾಕ ದಾರ್ಶನಿಕರ ಕಾಲಘಟ್ಟದಲ್ಲಿ. ಮಬ್ಬಲಿ ವಿಚಾರಧಾರೆಗಳ ಬಹುಮುಖ್ಯ ದಾರ್ಶನಿಕರಾದ ಪುರಾಣ ಕಸ್ಸಪ, ಅಜಿತ ಕೇಸಂಬಲಿ ಮತ್ತು ಮಬ್ಬಲಿ ಗೋಸಾಲ ಸಾಂಪ್ರದಾಯಿಕವಾದ ಕರ್ಮಸಿದ್ಧಾಂತದಲ್ಲಿನ ಅಪನಂಬಿಕೆ, ಹೊಸ ಪ್ರಯತ್ನಗಳಿಗೆ ಅವಕಾಶವಿಲ್ಲದಿರುವಿಕೆ, ದೈವದಿಂದಾಚೆ ಮನುಷ್ಯ ಪ್ರಯತ್ನಗಳು ಸಾಧ್ಯವಿಲ್ಲವೆಂಬ ಕಟ್ಟುಪಾಡನ್ನು ವಿರೋಧಿಸಿದರು. 'ನಿಯತಿ ತತ್ವ, ಪರಮಾಣು ತತ್ವದ ಪ್ರತಿಪಾದನೆ ಹಾಗೂ ನೈತಿಕವಾದ ವಿತಂಡವಾದ' ಮಬ್ಬಲಿ ಸಿದ್ಧಾಂತದ ಮುಖ್ಯ ಪ್ರತಿಪಾದನೆಗಳು.

ಗೋಸಾಲನ ಪೂರ್ವಜರು ತಮಿಳುನಾಡಿನ ತಿರಪತ್ತೂರು ಅಥವಾ ತಿರುಚಿರಪ್ಪು ಎಂಬ ಭಾಗಕ್ಕೆ ಸೇರಿದವರಾಗಿದ್ದರು. ಇವನ ತಂದೆಯಾಗಿದ್ದ ಮಂಕ ಗರ್ಭಿಣಿಯಾಗಿದ್ದ ಹೆಂಡತಿ ಭದ್ರಳನ್ನು ಕರೆದುಕೊಂಡು 'ಸರವಣ' ಎಂಬ ಹಳ್ಳಿಗೆ ಬರುತ್ತಾನೆ. ಅಲ್ಲಿನ ಶ್ರೀಮಂತ ಗೋಬಹುಳನ ಆಶ್ರಯ ಪಡೆಯುತ್ತಾನೆ. ಬೇರೆಲ್ಲೂ ವ್ಯವಸ್ಥಿತವಾದ ಆಶ್ರಯ ದೊರೆಯದ ಕಾರಣ ಗೋಬಹುಳನ ಕೊಟ್ಟಿಗೆಯ ಮೂಲೆಯಲ್ಲಿ ನೆಲೆಸುತ್ತಾರೆ. ಅಲ್ಲಿಯೇ ಭದ್ರ ಗೋಸಾಲನಿಗೆ ಜನ್ಮವೀಯುತ್ತಾಳೆ. ಏಸುವಿನ ಹಾಗೆಯೆ ಕೊಟ್ಟಿಗೆಯಲ್ಲಿ ಜನಿಸಿದ ಗೋಸಾಲ 24ನೆಯ ತೀರ್ಥಂಕರನಾಗಿದ್ದ ಮಹಾವೀರ ಹಾಗೂ ಬುದ್ಧನ ಸಮಕಾಲೀನನಾಗಿದ್ದನಲ್ಲದೆ ಅವರೊಂದಿಗೆ ಒಡನಾಟವನ್ನು ಸಹ ಇಟ್ಟುಕೊಂಡಿದ್ದ. ಇವನ ತಂದೆ ಮಂಕ ದೇವತೆಗಳ ಉಗ್ರರೂಪವನ್ನು ಬಿಡಿಸಿ, ಅದನ್ನು ಹೊತ್ತು ಮಾರಾಟ ಮಾಡುತ್ತಿದ್ದ. ಈ ವೃತ್ತಿಯನ್ನು ಹೀನವೃತ್ತಿಯೆಂದು ಪರಿಗಣಿಸಲಾಗಿತ್ತು. ಮಂಕನ ಮಗನಾದ್ದರಿಂದ ಮಂಕಲಯೆಂದು, ಮುಂದೆ ಮಬ್ಬಲಿಯಾಗಿ ಗೋಸಾಲ ಕರೆಸಿಕೊಂಡು, ಗೋಶಾಲೆಯಲ್ಲಿ ಹುಟ್ಟಿದ್ದರಿಂದ ಗೋಸಾಲನೆಂಬ ಹೆಸರು ಮಬ್ಬಲಿಯೊಂದಿಗೆ ಸೇರಿಕೊಂಡಿತು.

ಜೈನ ಧರ್ಮದ ಭಗವತಿ ಸೂತ್ರದಲ್ಲಿ ಬರುವ ಪ್ರಕರಣವೊಂದು ಆರು ವರ್ಷಗಳ ಕಾಲ ಒಡನಾಡಿಗಳಾಗಿ ಅಲೆದ ಮಹಾವೀರ ಮತ್ತು ಗೋಸಾಲನ ನಡುವೆ ಭಿನ್ನಾಭಿಪ್ರಾಯ ಮೂಡಿಸುತ್ತದೆ. ಅಲೆದಾಟದ ಸಂದರ್ಭದಲ್ಲಿ ಹಾದಿಬದಿಯ ಎಳ್ಳಿನ ಗಿಡವೊಂದನ್ನು ತೋರಿ ಗೋಸಾಲ ಆ ಗಿಡದ ವಿಧಿ ಮತ್ತು ಭವಿಷ್ಯ ಎಂತಹದು ಎಂದು ಪ್ರಶ್ನಿಸುತ್ತಾನೆ. ಮಹಾವೀರ ಆ ಗಿಡ 'ಫಲಭರಿತವಾಗಿ ಬೆಳೆದು ಅದರ ಬೀಜಗಳಿಂದ ಮತ್ತಷ್ಟು ಗಿಡಗಳು ಹುಟ್ಟಿಕೊಳ್ಳುತ್ತವೆ' ಎನ್ನುತ್ತಾನೆ. ಈ ನಿಯತಿಯನ್ನು ಸುಳ್ಳಾಗಿಸಲು ರಾತ್ರಿಯಲ್ಲಿ ಬಂದು ಬುಡಸಮೇತ ಕಿತ್ತು ಎಸೆಯುತ್ತಾನೆ. ಆ ರಾತ್ರಿ ಸುರಿದ ಮಳೆಯಲ್ಲಿ ಭೂಮಿಗೆ ಬೇರಿಳಿಬಿಟ್ಟ ಆ ಗಿಡ ಮರುಜೀವ ಪಡೆಯುತ್ತದೆ. ಕಾಲಾನಂತರ ಅದರ ಬೀಜಗಳಿಂದ ಅಸಂಖ್ಯಾತ ಗಿಡಗಳು ಮರುಹುಟ್ಟು ಪಡೆಯುತ್ತವೆ. ಒಂದಷ್ಟು ಕಾಲದ ನಂತರ ಅದೇ ದಾರಿಯಲ್ಲಿ ಬಂದು ಗಿಡದ ಬಗ್ಗೆ ಹುಡುಕಾಟ ನಡೆಸಿದಾಗ ಅದರ ಸಂತಾನವೃದ್ಧಿಯಾಗಿರುವುದನ್ನು ಗೋಸಾಲ ಕಂಡು ಕೊಳ್ಳುತ್ತಾನೆ. ಈ ಪ್ರಸಂಗದಿಂದಾಗಿ ಹೊಸ ತತ್ವ ಕಂಡು ಕೊಂಡ ಗೋಸಾಲ 'ಹಿಂದೊಮ್ಮೆ ಮಹಾವೀರನೊಂದಿಗಿದ್ದ ಗೋಸಾಲ ಹೊಸ ಆತ್ಮದೊಂದಿಗೆ ಹೊಸ ಶರೀರವನ್ನು ಪಡೆದ' ಎಂದು ಘೋಷಿಸಿಕೊಂಡ. ಈ ಘೋಷಣೆ ಗೋಸಾಲ ಮತ್ತು ಮಹಾವೀರನ ನಡುವೆ ಬಿರುಕು ಹುಟ್ಟಿಸಿ ಇಬ್ಬರೂ ದೂರವಾಗುತ್ತಾರೆ.

ಕ್ರಿ.ಪೂ. 5 ರಿಂದ 6ನೇ ಶತಮಾನದಲ್ಲಿ ಜೀವಿಸಿದ್ದ ಗೋಸಾಲ ತನ್ನ ಜೀವಿತದ ಕೊನೆಯ ಹದಿನಾರು ವರ್ಷಗಳನ್ನು ಶ್ರಾವಸ್ಥಿಯ ಶ್ರೀಮಂತ ಕುಂಬಾರಗಿತ್ತಿ ಹಾಲಾಹಲಾಳ ಆಶ್ರಯದಲ್ಲಿ ಕಳೆದ. ಜೀವನದ ಕೊನೆಯ ಭಾಗದಲ್ಲಿ ಮಹಾವೀರನ ಜೊತೆ ಸಂಘರ್ಷಕ್ಕಿಳಿದ ಗೋಸಾಲ 'ಈ ಅವಸರ್ಪಿಣಿ ಯುಗದಲ್ಲಿ ನಾನೇ ಕೊನೆಯ ತೀರ್ಥಂಕರ' ಎಂದು ಘೋಷಿಸಿಕೊಂಡ. ತಾನು ಸತ್ತ ನಂತರ ತನ್ನ ಹೆಣವನ್ನು ಗಂಧದ ನೀರಿನಿಂದ ಶುದ್ಧೀಗೊಳಿಸಿ ಶ್ರಾವಸ್ಥಿಯ ಬೀದಿಯಲ್ಲಿ ಮೆರವಣಿಗೆ ಮಾಡಬೇಕೆಂದು, ಶವಸಂಸ್ಕಾರದಲ್ಲಿ ಹದಿನಾರು ಗಣರಾಜ್ಯಗಳ ರಾಜರೆಲ್ಲರೂ ಭಾಗವಹಿಸಬೇಕೆಂದು ಆದೇಶಿಸಿದ. ಮೂರು ದಿನದ ನಂತರ ವಿಕ್ಷಿಪ್ತತೆಯಿಂದ ಹೊರಬಂದು 'ಮಹಾವೀರನೇ ತೀರ್ಥಂಕರ. ದ್ರೋಹಿಯಾದ, ಕೊಲೆಗಾರನಾದ ನನ್ನ ಹೆಣದ ಎಡಗಾಲಿನ ಹೆಬ್ಬೆರಳಿಗೆ ದಾರಕಟ್ಟಿ ಶ್ರಾವಸ್ಥಿಯ ಬೀದಿಯಲ್ಲಿ ಎಳೆದಾಡಿರಿ. ನನ್ನ ಮುಖದ ಮೇಲೆ ಉಗಿದು ಸಂಸ್ಕಾರವಿಲ್ಲದ ಶವವನ್ನು ನಾಯಿ, ನರಿ, ಹದ್ದುಗಳಿಗೆ ಹಾಕಿ' ಎಂದು ಹೇಳಿದ. ಅದೇ ರೀತಿ ಶಿಷ್ಯರು ನುಡಿಸುತ್ತಿದ್ದ ವೀಣೆಯ ನಾದಕ್ಕೆ ಕುಣಿಯುತ್ತಿದ್ದಾಗಲೇ ಕುಸಿದು ಮರಣಿಸಿದಾಗ ಶಿಷ್ಯರಿಗೆ ಶವಸಂಸ್ಕಾರದ ಪ್ರಶ್ನೆ ಎದುರಾಗುತ್ತದೆ. ಕೊನೆಗೆ ಹಾಲಾಹಲಾಳ ಮನೆಯ ಒಳಗೆ ಶ್ರಾವಸ್ತಿಯ ನಕ್ಷೆ ಬಿಡಿಸಿ, ಆ ನಕ್ಷೆಯಲ್ಲಿನ ಬೀದಿಗಳಲ್ಲಿ ಎಡಗಾಲಿನ ಹೆಬ್ಬೆರಳಿಗೆ ದಾರಕಟ್ಟಿ ಅವನ ಹೆಣವನ್ನು ಎಳೆದು, ಮುಖದ ಮೇಲೆ ಉಗಿದು 'ಗೋಸಾಲ ಜಿನನಲ್ಲ' ಎಂದು ಘೋಷಿಸುತ್ತಾರೆ. ಆ ನಂತರ ಶವವನ್ನು ಹೊರಲೆಂದು ಬೀದಿ ಬೀದಿಯಲ್ಲಿ ಮೆರವಣಿಗೆ ಮಾಡಿ ಸಂಸ್ಕಾರ ಮಾಡುತ್ತಾರೆ.

ಗೋಸಾಲನ ಈ ಕಥೆ ಅನಾರ್ಯನೊಬ್ಬ ಆರ್ಯ ವೈದಿಕರ ಚಿಂತನೆ, ದಾರ್ಶನಿಕತೆಗಳ ವಿರುದ್ಧ ನಡೆಸಿದ ಹೋರಾಟವಾಗಿಯೂ, ಆಜೀವಕದಂತಹ ದಾರ್ಶನಿಕ ಪಂಥವನ್ನು ನಿಲ್ಲಿಸುವುದಕ್ಕಾಗಿ ನಡೆಸಿದ ಹೋರಾಟದ ಕಥನವಾಗಿಯೂ ತೋರುತ್ತದೆ. ಮುಂದೆ, ಬೌದ್ಧ ಹಾಗೂ ಜಿನ ಧರ್ಮಗಳು ಅಜೀವಕ ಪಂಥವನ್ನು ಪಕ್ಕಕ್ಕೆ ತಳ್ಳಿ ಬೆಳೆದು ಬಂದ ಕಥೆಯನ್ನು ಧರ್ಮಗಳ ಉತ್ಥಾನದ ಕಥೆಗಳಾಗಿಯೇ ನಾವು ಓದುತ್ತಾ ಬಂದಿದ್ದೇವೆ. ಚರಿತ್ರೆಯಲ್ಲಿನ ಸಂಕಟಗಳಿಗೆ ಹಲವು ಮುಖಗಳಿದ್ದು ಅದರ ಆಳಕ್ಕೆ ಇಳಿದಾಗಲೇ ಅದರ ಒಳಸುಳಿಗಳ ಕಥೆ ನಮಗೆ ಅರ್ಥವಾಗುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

- ನಿನ್ನನ್ನು ನೀನು ನಂಬದ ಹೊರತು ನಿನಗೆ ದೇವರಲ್ಲಿ ನಂಬಿಕೆ ಬರದು.
  —ಸ್ವಾಮಿ ವಿವೇಕಾನಂದ
- ಒಬ್ಬನೇ ಒಬ್ಬನ ಮೆಚ್ಚುಗೆಯ ಚಪ್ಪಾಳೆ ಸಹ ಅಪಾಯಕಾರಿ.
  —ಸ್ಯಾಮುಯಲ್ ಜಾನ್ಸನ್
- 'ವ್ಯರ್ಥ ಪ್ರೀತಿ' ಎನ್ನಬೇಡ, ಏಕೆಂದರೆ ಪ್ರೀತಿ ಎಂದೂ ವ್ಯರ್ಥವಾಗುವುದಿಲ್ಲ.
  —ಲಾಂಗ್ ಫೆಲೋ
- ಏಕಾಂತ ಅಲ್ಪರ ರಕ್ಷಣೆ, ಪ್ರತಿಭಾವಂತರ ಯೋಗ್ಯ ಸ್ನೇಹಿತ.
  —ಎಮರ್ ಸನ್
- ಯಾರಿಗೆ ಸ್ವಬುದ್ಧಿ ಇಲ್ಲವೋ ಅವನಿಗೆ ಶಾಸ್ತ್ರ ಏನನ್ನು ತಾನೇ ಮಾಡೀತು? ಕಣ್ಣಿಲ್ಲದವನಿಗೆ ಕನ್ನಡಿ ಏನನ್ನು ಮಾಡುತ್ತದೆ?
  —ಯೋಗವಾಸಿಷ್ಠ
- ವೈವಿಧ್ಯ ಸಂತೋಷದ ತಾಯಿ.
  —ಬೆಂಜಮಿನ್ ಡಿಸ್ರೇಲಿ